**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್, ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕರು, ಶ್ರೀ ಎನ್.ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಇತರರು ರವರು ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ಪ್ರಶ್ನೆ:** ಅನ್ಯ ಧರ್ಮದ ಯುವತಿಯರನ್ನು ಪ್ರೀತಿಸಿದ್ದಾರೆ ಎಂಬ ಕಾರಣಕ್ಕೆ ಕೊಪ್ಪಳದಲ್ಲಿ 03-08-2025 ರಂದು ವಾಲ್ಮೀಕಿ ಸಮುದಾಯದ ಹಿಂದೂ ಕಾರ್ಯಕರ್ತರನ್ನು ಅನ್ಯ ಸಮುದಾಯದ ವ್ಯಕ್ತಿ ಮಚ್ಚಿನಿಂದ ಬರ್ಬರವಾಗಿ ಹತ್ಯೆ ಮಾಡಿರುವುದು ಅಮಾನುಷ ಮತ್ತು ಖಂಡನೀಯ. ಕೊಲೆಗೆ ಮುನ್ನ ದಿನವೇ ಮಚ್ಚು ಹಿಡಿದು ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಾಕಿದ್ದರೂ, ಪೊಲೀಸರು ಮುಂಜಾಗ್ರತಾ ಕ್ರಮ ಕೈಗೊಂಡಿದ್ದರೆ ಈ ದಾರುಣ ಘಟನೆ ತಪ್ಪಿಸಬಹುದಿತ್ತು. ಸ್ಥಳೀಯ ಪೊಲೀಸರ ನಿರ್ಲಕ್ಷ್ಯದಿಂದ ಜನರಲ್ಲಿ ವಿಶ್ವಾಸ ಕುಸಿದಿದ್ದು, ಸದರಿ ಪ್ರಕರಣವನ್ನು ತಕ್ಷಣವೇ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಥವಾ ಸಿಬಿಐಗೆ ಹಸ್ತಾಂತರಿಸಬೇಕು. ಕೊಪ್ಪಳದ ಮಸೀದಿ ಮುಂದೆಯೇ ನಡೆದ ಈ ಹತ್ಯೆ ನಾಗರಿಕ ಸಮಾಜ ತಲೆತಗ್ಗಿಸುವ ಹೇಯ ಕೃತ್ಯವಾಗಿದ್ದು, ಕುಟುಂಬಕ್ಕೆ ತಕ್ಷಣ ನ್ಯಾಯ ಮತ್ತು ನೆರವು ಒದಗಿಸಬೇಕು. ಕರಾವಳಿ ಭಾಗದಲ್ಲಿ ಹಿಂದೂ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡಿದ್ದ ಸಮಾಜಘಾತುಕ ಹಾಗೂ ದೇಶದ್ರೋಹಿ ಶಕ್ತಿಗಳ ಚಟುವಟಿಕೆಗಳು ಇದೀಗ ಕೊಪ್ಪಳ ಜಿಲ್ಲೆಗೂ ವಿಸ್ತರಿಸಿರುವುದು ಅತ್ಯಂತ ಆತಂಕಕಾರಿ, ಗೃಹ ಸಚಿವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ ಎಂಬುವುದರ ಕುರಿತು.

**ಉತ್ತರ:** ಕೊಪ್ಪಳ ನಗರದಲ್ಲಿ ದಿನಾಂಕ:03.08.2025 ರಂದು ರಾತ್ರಿ 08.15 ಗಂಟೆಗೆ ಫಿರ್ಯಾದಿದಾರರಾದ ಶ್ರೀ ನಿಂಗಜ್ಜ ಟಣಕನಕಲ್ ಜಾ: ವಾಲ್ಮೀಕಿ ಸಾ:ಕುರುಬರ ಓಣಿ, ಕೊಪ್ಪಳ ಜಿಲ್ಲೆ ರವರು ನೀಡಿದ ದೂರಿನಲ್ಲಿ ತಮ್ಮ ಮಗನಾದ ಗವಿಸಿದ್ದಪ್ಪನನ್ನು ನಗರದ ಗೌರಿ ಅಂಗಳದ ಒಬ್ಬ ಹುಡುಗಿಯನ್ನು ಪ್ರೀತಿಸಿದಕ್ಕೆ ಸಿಟ್ಟು ಮಾಡಿಕೊಂಡು ಕೊಪ್ಪಳ ನಗರದ ಸೈಲಾನಪುರ ಓಣಿಯ ಸಾದೀಕ ಹುಸೇನ ಕೋಲ್ಕಾರ ಈತನು ತನ್ನ ಜೊತೆಯಲ್ಲಿ ಇತರೆ ಮೂರು ಜನರನ್ನು ಸೇರಿಸಿಕೊಂಡು ದಿನಾಂಕ:03.08.2025 ರಂದು ರಾತ್ರಿ 07.30 ಗಂಟೆ ಸುಮಾರಿಗೆ ಕೊಪ್ಪಳದ ನಿರ್ಮಿತಿ ಕೇಂದ್ರದ ಹತ್ತಿರದ ರಸ್ತೆಯಲ್ಲಿ ಗವಿಸಿದ್ದಪ್ಪನಿಗೆ ಸಾಯಿಸುವ ಉದ್ದೇಶದಿಂದ ಸಾದೀಕನು ತನ್ನ ಕೈಯಲ್ಲಿದ್ದ ಎರಡು ಮಚ್ಚುಗಳಿಂದ ಗವಿಸಿದ್ದಪ್ಪನ ಕುತ್ತಿಗೆಗೆ ಜೋರಾಗಿ ಹೊಡೆದು ಕೊಲೆ ಮಾಡಿ ಸಂಗಡಿರೊಂದಿಗೆ ಓಡಿ ಹೋಗಿರುತ್ತಾರೆ ಎಂದು ನೀಡಿದ ದೂರಿನ ಮೇರೆಗೆ ಕೊಪ್ಪಳ ನಗರ ಠಾಣೆ ಗುನ್ನೆ ನಂ:85/2025 ಕಲಂ-103(1), 3(5) ಬಿಎನ್‌ಎಸ್-2023 ಮತ್ತು 3(2)(V) ಎಸ್.ಸಿ/ಎಸ್.ಟಿ ಕಾಯ್ದೆ-1989ರಡಿ ಪ್ರಕರಣ ದಾಖಲಿಸಲಾಗಿದೆ.

ಕೊಲೆ ಮಾಹಿತಿಯು ಬಂದ ತಕ್ಷಣ ಪೊಲೀಸ್ ಅಧೀಕ್ಷಕರು, ಕೊಪ್ಪಳ ಜಿಲ್ಲೆ ರವರು ಪಿ.ಐ ಕೊಪ್ಪಳ ನಗರ ಠಾಣೆಯವರೊಂದಿಗೆ ಖುದ್ದಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಕೃತ್ಯ ನಡೆದ ಸ್ಥಳವನ್ನು ಸಂರಕ್ಷಣೆ ಮಾಡಿ, ಜಿಲ್ಲಾ ಸೋಕೋ ತಜ್ಞರ Scene of Crime Officers (SOCO) ತಂಡದಿಂದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿರುತ್ತದೆ.

ಕೊಪ್ಪಳ ನಗರದಲ್ಲಿ ಎರಡು ಸಮುದಾಯಗಳ ನಡುವೆ ಯಾವುದೇ ರೀತಿಯ ಗಲಭೆ ಉಂಟಾಗದಂತೆ ಅಗತ್ಯ ಮುಂಜಾಗೃತ ಕ್ರಮವನ್ನು ಆಯಕಟ್ಟಿನ ಸ್ಥಳಗಳಲ್ಲಿ ಸೂಕ್ತ ಬಂದೋಬಸ್ತ್ ನಿಯೋಜನೆ ಮಾಡಲಾಗಿರುತ್ತದೆ.

ತನಿಖೆಯನ್ನು ಡಿಎಸ್‌ಪಿ, ಸಿಇಎನ್ ಪೊಲೀಸ್ ಠಾಣೆ, ಕೊಪ್ಪಳ (ಪ್ರಭಾರ ಡಿಎಸ್‌ಪಿ ಕೊಪ್ಪಳ ಉಪವಿಭಾಗ) ರವರು ವಹಿಸಿಕೊಂಡು, ಪ್ರಕರಣದಲ್ಲಿ ಭಾಗಿಯಾದ ಈ ಕೆಳಕಂಡ 1ನೇ ಆಪಾದಿತನನ್ನು ದಿನಾಂಕ:04.08.2025 ರಂದು ಮತ್ತು ಆರೋಪಿ- 2, ಆರೋಪಿ- 3 ಮತ್ತು ಆರೋಪಿ- 4 ರವರನ್ನು ದಿನಾಂಕ:05.08.2025 ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿರುತ್ತದೆ.

ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕಿಯನ್ನು ದಿನಾಂಕ:07.08.2025 ರಂದು ಬಾಲನ್ಯಾಯ ಮಂಡಳಿ, ಕೊಪ್ಪಳ ಮುಂದೆ ಹಾಜರಪಡಿಸಿ ನಂತರ ದಾವಣಗೆರೆ ಜಿಲ್ಲೆಯ ವೀಕ್ಷಣಾಲಯಕ್ಕೆ ಕಳುಹಿಸಲಾಗಿರುತ್ತದೆ.

**ಪ್ರಕರಣದಲ್ಲಿಯ ಆಪಾದಿತರ ವಿವರ :-**

1. **ಸಾದಿಕ್ ಹುಸೇನ್** ತಂದೆ ಮೌಲಾಹುಸೇನ್ ಕೊಲ್ಕಾರ್. ವಯಸ್ಸು 23 ವರ್ಷ, ಜಾತಿ: ಮುಸ್ಲಿಂ, ಉ:ಸೆಂಟ್ರಿಂಗ್ ಕೆಲಸ, ಸಾ: ಸೈಲಾನ್‌ರ ಓಣಿ, ಕೊಪ್ಪಳ.
2. **ಮಹೆಬೂಬ @ ಮಹಿಬೂಬ @ ಗಿಡ್ಡು** ತಂದೆ ಖಾಜಾವಲಿ ಸಿಕ್ಕಲಗಾರ, ವಯಸ್ಸು: 20 ವರ್ಷ, ಜಾತಿ: ಮುಸ್ಲಿಂ, ಉ:ಟೇಲರ್ ಕೆಲಸ, ಸಾ:ಮಿಟ್ಟಿಕೇರಿ ಓಣಿ, ಕೊಪ್ಪಳ,
3. **ನಿಜಾಮುದ್ದೀನ** ತಂದೆ ಮೊಹಮ್ಮದ್ ಹುಸೇನಸಾಬ ಗೋರವಾಲಿ, ವಯಸ್ಸು: 26 ವರ್ಷ, ಜಾತಿ: ಮುಸ್ಲಿಂ, ಉ:ವೆಲ್ಡಿಂಗ್ ಕೆಲಸ, ಸಾ:ನಿರ್ಮಿತಿ ಕೇಂದ್ರ, ಕೊಪ್ಪಳ,
4. **ಗೇಸುದರಾಜ್** ತಂದೆ ಮಕ್ತುಂಸಾಬ ಪಟೇಲ @ ವಾಲೀಕಾರ, ವಯಸ್ಸು: 22 ವರ್ಷ, ಜಾತಿ: ಮುಸ್ಲಿಂ, ಉ:ಫರ್ನಿಚರ್ಸ ಕೆಲಸ, ಸಾ:ಮಿಟ್ಟಿಕೇರಿ ಓಣಿ, ಕೊಪ್ಪಳ,
5. **ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕಿ**

ಪ್ರಕರಣದ ತನಿಖೆ ಕಾಲಕ್ಕೆ ಕೃತ್ಯಕ್ಕೆ ಉಪಯೋಗಿಸಿದ 02 ಮಚ್ಚು, 05 ಮೊಬೈಲ್, 01 ಮೋಟಾರ್ ಸೈಕಲ್ ಹಾಗೂ ಇತರೆ ಸಾಕ್ಷ್ಯಾಧಾರಗಳನ್ನು ಪ್ರಕರಣದ ಪುರಾವೆ ಕುರಿತು, ಎಫ್‌ಎಸ್‌ಎಲ್ ಪರೀಕ್ಷೆಗಾಗಿ ಜಪ್ತಿಪಡಿಸಿಕೊಳ್ಳಲಾಗಿದೆ.

ಕೊಲೆ ಘಟನೆಗೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳಿಂದ ಕ್ರಮಬದ್ಧವಾಗಿ ನಿಯಮಾನುಸಾರ ತನಿಖೆಯನ್ನು ಕೈಗೊಂಡು ವೈಜ್ಞಾನಿಕ ಹಾಗೂ ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ್ದು, ಕೃತ್ಯದಲ್ಲಿ ಭಾಗಿಯಾದ ಎಲ್ಲಾ ಆಪಾದಿತರನ್ನು ದಸ್ತಗಿರಿ ಮಾಡಲಾಗಿರುತ್ತದೆ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕಿಯನ್ನು ಬಾಲನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಲಾಗಿರುತ್ತದೆ.

ದಿನಾಂಕ:11.08.2025 ರಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಕೊಪ್ಪಳ ನಗರದಲ್ಲಿ ಮೃತ ಗವಿಸಿದ್ದಪ್ಪನ ಕೊಲೆ ಖಂಡಿಸಿ ನಡೆದ ಪ್ರತಿಭಟನಾ ಮೆರವಣಿಗೆ ಕಾಲಕ್ಕೆ ಸೂಕ್ತ ಬಂದೋಬಸ್ತ್ ಮಾಡಲಾಗಿರುತ್ತದೆ.

ಘಟನೆ ನಂತರದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಕೊಲೆ ಪ್ರಕರಣದ ಕುರಿತು ವಿವಿಧ ಶೀರ್ಷಿಕೆಗಳಡಿಯಲ್ಲಿ ಸುದ್ದಿಗಳು ಬಿತ್ತರಗೊಂಡಿದ್ದು, ಕೊಪ್ಪಳ ಜಿಲ್ಲೆ ಸೋಷಿಯಲ್ ಮಿಡಿಯಾ ಮಾನಿಟರಿಂಗ್ ಸೆಲ್‌ದಿಂದ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಗೊಳ್ಳುವ ಸುಳ್ಳು ಹಾಗೂ ಪ್ರಚೋದನಾತ್ಮಕ ಪೋಸ್ಟ್ ಹಾಗೂ ಕಮೆಂಟ್‌ಗಳ ಬಗ್ಗೆ ನಿಗಾವಹಿಸಲಾಗಿದೆ.

ಪ್ರಕರಣದ ಮುಂದಿನ ತನಿಖೆ ಕುರಿತು ಪೊಲೀಸ್ ಅಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬಳ್ಳಾರಿ ವಲಯ ರವರು ಪ್ರಕರಣಕ್ಕೆ ತನಿಖಾಧಿಕಾರಿ ನೇಮಕ ಮಾಡಿ ಆದೇಶ ಮಾಡಿದ್ದರಿಂದ ದಿನಾಂಕ:11.08.2025 ರಂದು ಪ್ರಕರಣವನ್ನು ಮುಂದಿನ ತನಿಖೆ ಕುರಿತು ಪಿ.ಐ, ಡಿ.ಸಿ.ಆರ್.ಇ ಪೊಲೀಸ್ ಠಾಣೆ, ಕೊಪ್ಪಳಕ್ಕೆ ವರ್ಗಾವಣೆ ಮಾಡುವ ಕುರಿತು ಡಿಎಸ್‌ಪಿ, ಕೊಪ್ಪಳ ರವರಿಗೆ ಸೂಚಿಸಲಾಗಿರುತ್ತದೆ.

ಕೊಪ್ಪಳ ನಗರದಲ್ಲಿ ನಡೆದ ಕೊಲೆ ಘಟನೆಗೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳಿಂದ ಕ್ರಮಬದ್ಧವಾಗಿ ತನಿಖೆಯನ್ನು ಕೈಗೊಂಡು ವೈಜ್ಞಾನಿಕ ಹಾಗೂ ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ್ದು ಇರುತ್ತದೆ. ಕೃತ್ಯದಲ್ಲಿ ಭಾಗಿಯಾದ ಎಲ್ಲಾ ಆಪಾದಿತರನ್ನು ದಸ್ತಗಿರಿ ಮಾಡಲಾಗಿರುತ್ತದೆ. ಪ್ರಕರಣದ ತನಿಖೆಯು ಪ್ರಗತಿಯಲ್ಲಿರುತ್ತದೆ.

**ಸಂಖ್ಯೆ: ಹೆಚ್‌ಡಿ 79 ಪಿಸಿಕ್ಯೂ 2025**

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು